





# A – ಲೈನ್ ರಾಗ್ಲನ್ ಡ್ರೆಸ್

***ಈ ವೀಡಿಯೋದಲ್ಲಿ A – ಲೈನ್ ರಾಗ್ಲನ್ ಡ್ರೆಸ್ಸನ್ನು ಹೇಗೆ ಹೊಲೆಯೋದು ಎಂದು ನೋಡೋಣ.***

## ವಸ್ತುಗಳ ವಿವರ

ಇದಕ್ಕೆ ಬೇಕಾಗುವ ವಸ್ತುಗಳು :
60 ಇಂಚು ಅಗಲವಿರುವ 3.5 ಮೀಟರ್ ಬಟ್ಟೆ
www.ushasew.com ನಿಂದ ಡೌನ್ಲೋಡ್ ಮಾಡಿಕೊಂಡಿರುವ A – ಲೈನ್ ರಾಗ್ಲನ್ ಡ್ರೆಸ್ ನ ಟೆಂಪ್ಲೇಟ್
ಚಾಲ್ಕ್,
ಕತ್ತರಿ
ದಾರ
ಪಿನ್
ತಯಾರಾಗಿರುವ ಬಯಾಸ್ ಸ್ಟ್ರಿಪ್

ನಾವೀಗ ಮುಂಭಾಗ, ಹಿಂಭಾಗ ಮತ್ತು ತೋಳಿನ್ನು ಟೆಂಪ್ಲೇಟ್ ಸಹಾಯದಿಂದ ಕತ್ತರಿಸಿ, ಸೈಡ್ ಸೀಮ್, ಮುಂಭಾಗ, ಹಿಂಭಾಗ ಮತ್ತು ತೋಳನ್ನು ಹೊಲೆಯುವುದು, ತೋಳು ಮತ್ತು ತುದಿಯನ್ನು ಹೆಮ್ಮಿಂಗ್ ಮಾಡುವುದು ಮತ್ತು ಕತ್ತಿನ ಭಾಗವನ್ನು ಹೊಲೆಯುವುದನ್ನು ಕಲಿಯೋಣ.

## ಹಂತ 1 : ಟೆಂಪ್ಲೇಟಿನಂತೆ ಮಾರ್ಕಿಂಗ್ ಮತ್ತು ಕಟ್ಟಿಂಗ್


ಈಗ ನಾವು ಬಟ್ಟೆಯ ಮಡಕೆಯನ್ನು ತೆಗೆಯೋಣ.ವೀಡಿಯೋದಲ್ಲಿರುವಂತೆ ಪೂರ್ತಿ ತೆಗೆಯಿರಿ. ಹಿಂಭಾಗಕ್ಕೆ ತಿರುಗಿಸಿ. ಈಗ 1/3ರಷ್ಟು ಬಟ್ಟೆಯನ್ನು ಮಡಚಿ ಅದನ್ನು ಟೆಂಪ್ಲೇಟಿನ ಮೇಲ್ಭಾಗವನ್ನು ಅದರ ಮೇಲಿಡಿ. ನೆನಪಿಡಿ ಬಟ್ಟೆ ಮಡಚಿರುವ ಭಾಗವು ಟೆಂಪ್ಲೇಟಿನ ಮಡಚುವ ಭಾಗ ಒಂದೇ ಇರಬೇಕು.

ಈಗ, ಟೆಂಪ್ಲೇಟನ್ನು ಬಟ್ಟೆಯೊಂದಿಗೆ ಪಿನ್ನಿಂದ ಭದ್ರಗೊಳಿಸಿ. ಪಿನ್ ಬಟ್ಟೆಯ ಎರಡೂ ಪದರಕ್ಕೆ ಇರುವಂತೆ ನೋಡಿಕೊಳ್ಳಿ, ಇದು ಮಾರ್ಕಿಂಗಿಗೆ ಸುಲಭವಾಗುತ್ತದೆ. ನಂತರ ಟೆಂಪ್ಲೇಟಿನಲ್ಲಿರುವಂತೆ ವೀಡಿಯೋದಲ್ಲಿರುವಂತೆ ಮಾರ್ಕ್ ಮಾಡಿ.ನಿಧಾನವಾಗಿ ಮಾರ್ಕ್ ಮಾಡಿ ಇಲ್ಲದ್ದಿದ್ದರೆ ಡ್ರೆಸ್ ಪ್ಯಾಟರ್ನ್ ಹರೆಯಬಹುದು.ಮಾರ್ಕ್ ಮಾಡಿದ ನಂತರ ಕತ್ತರಿಯ ಸಹಾಯದಿಂದ ಮಾರ್ಕಿಂಗಿನ ಮೇಲೆ ಕತ್ತರಿಸಿ.ಇದು ಮುಂಭಾಗದ ಪೀಸ್. ಇದನ್ನು ನಂತರ ಹೊಲೆಯೋಣ ಪಕ್ಕಕ್ಕಿಡಿ.

ಬಟ್ಟೆಯ ಹಿಂಭಾಗಕ್ಕೆ ಮಿಕ್ಕಿರುವ ಬಟ್ಟೆಯನ್ನು ಅರ್ಧಕ್ಕೆ ವೀಡಿಯೋದಲ್ಲಿ ತೋರಿಸಿರುವ ಹಾಗೆ ಬಟ್ಟೆ ಮಡಚಿರುವ ಭಾಗದಲ್ಲಿ ಕತ್ತರಿಸಿ. ನೆನಪಿಡಿ ಬಟ್ಟೆ ಮಡಚಿರುವ ಭಾಗವು ಟೆಂಪ್ಲೇಟಿನ ಮಡಚುವ ಭಾಗ ಒಂದೇ ಇರಬೇಕು. ಟೆಂಪ್ಲೇಟಿಗೆ ಬಟ್ಟೆಯನ್ನು ಪಿನ್ ಮಾಡಿ, ಚಾಲ್ಕಿನ ಸಹಾಯದಿಂದ ಮಾರ್ಕ್ ಮಾಡಿ. ಇದಾದ ನಂತರ ಕತ್ತರಿಯಿಂದ ಮಾರ್ಕಿಂಗ್ ಮೇಲೆ ಕತ್ತರಿಸಿ. ನಿಮ್ಮ ಮುಂಭಾಗ ಮತ್ತು ಹಿಂಭಾಗ ಈಗ ಸಿದ್ಧವಾಗಿದೆ.









ನಾವೀಗ ತೋಳನ್ನು ಹೊಲೆಯಲು ಟೆಂಪ್ಲೇಟನ್ನು ತೆಗೆದುಕೊಂಡು ಬಟ್ಟೆಯ ಮೇಲಿಟ್ಟು ಮಾರ್ಕ್ ಮಾಡಿ, ಮುಂಭಾಗ ಮತ್ತು ಹಿಂಭಾಗವನ್ನು ಮಾಡಿದಂತೆ ಪುನರಾವರ್ತಿಸಿ. ನಂತರ ಪಿನ್ಗಳನ್ನು ತೆಗೆದು ಕತ್ತರಿಯ ಸಹಾಯದಿಂದ ಮಾರ್ಕಿಂಗ್ ಮೇಲೆ ಕತ್ತರಿಸಿ. ತೋಳಿನ ಅಳತೆಯನ್ನು ಪರಿಶಿಲಿಸಿ.

## ಹಂತ 2 : ಮುಂಭಾಗ ಮತ್ತು ಹಿಂಭಾಗವನ್ನು ಸೇರಿಸುವುದು



ನಾವೀಗ ಎಲ್ಲಾ ಭಾಗಗಳನ್ನು ಸೇರಿಸಿ ಹೊಲೆಯಲು ತಯಾರಾಗೋಣ. ಮೊದಲು ತೋಳನ್ನು ಮುಂಭಾಗದ ಪಕ್ಕದಲ್ಲಿ ವೀಡಿಯೋದಲ್ಲಿರುವಂತೆ ಜೋಡಿಸಿ. ನೆನಪಿರಲಿ ನಾವು ಬಟ್ಟೆಯ ಹಿಂಭಾಗದಲ್ಲಿ ಇದನ್ನು ಮಾಡುತ್ತಿದ್ದೇವೆ. ಬಲಭಾಗ ಬಲಭಾಗವನ್ನು ಕಾಣುವಂತೆ ಇರಬೇಕು. ಇನ್ನೊಂದು ಕಡೆನೂ ಇದನ್ನೇ ಮಾಡಬೇಕು.





ನಾವೀಗ ಹಿಂದಿನ ಭಾಗದ ಬಟ್ಟೆಯನ್ನು ತೋಳಿಗೆ ಹಿಂಭಾಗದಲ್ಲಿ ಇಟ್ಟು ವೀದಿಯೋದಲ್ಲಿ ತೋರಿಸಿರುವ ಹಾಗೆ ಪಿನ್ ಮಾಡಿ.ಇದು ಅತ್ಯಂತ ಮುಉಖ್ಯವಾದ ಹಂತ,ಪಿನ್ಗಳು ಭದ್ರವಾಗಿದೆಯೇ ಎಂದು ಪರಿಶೀಲಿಸಿ.










ಈಗ ಹೊಲೆಯಲು ಪ್ರಾರಂಭಿಸೋಣ. ಬಟ್ಟೆಯನ್ನು ಊಷಾ ಡ್ರೀಮ್ ಮೇಕರ್ 120 ಮಶೀನ್ ಹತ್ತಿರ ತೆಗೆದುಕೊಂಡು ಹೋಗಿ ಮಶೀನನ್ನು ಆನ್ ಮಾಡಿ.ಹೊಲೆಯುಲು ಪ್ರಾರಂಭಿಸಿ ಮತ್ತು ಹೊಲೆಯುವಾಗ ಪಿನ್ ತೆಗೆಯುತ್ತಾ ಹೋಗಿ. ನಮ್ಮ ಹತ್ರ ನಾಲ್ಕು ಪಿನ್ ಹಾಕಿರುವ ಭಾಗ ಹೊಲೆಯಲು ಇದೆ. ತೋಳನ್ನು ಮುಓಭಾಗ ಮತ್ತು ಹಿಂಭಾಗಕ್ಕೆ ಹೊಲೆಯಿರಿ. ಬಲಭಾಗದ ತೋಳನ್ನು ಮುಂಭಾಗ ಮತ್ತು ಹಿಂಭಾಗಕ್ಕೆ ಸೇರಿಸಿ ಮತ್ತು ಇದೇ ವಿಧಾನವನ್ನು ಇನ್ನೊಂದು ಕಡೆಗೂ ಪುನರವರ್ತಿಸಿ.ಇದು ಪುನರಾವರ್ತನೆ ಅನಿಸಬಹುದೌ ಆದರೆ ಅಂತಿಮ ಫಲಿತಾಂಶ ಉತ್ತಮವಾಗಿರುತ್ತದೆ.ನಿಮ್ಮ ಅಂತಿಮ ಹೊಲಿಗೆ ಹೀಗೆ ಕಾಣಬೇಕು. ಎಷ್ಟು ಚೆನ್ನಾಗಿದೆ ಅಲ್ವಾ!

## ಹಂತ 3 : ಕತ್ತಿನ ಭಾಗವನ್ನು ಹೊಲೆಯುವುದು






ಕತ್ತಿನ ಭಾಗವನ್ನು ಹೊಲೆಯಲು ಬಟ್ಟೆಗೆ ಹೊಂದುವಂತಹ ಬ್ಯಾಸ್ ಸ್ಟ್ರಿಪನ್ನು ಕತ್ತಿನ ಅಳತೆಗಿಂತ ಒಂದು ಇಂಚು ಜಾಸ್ತಿ ತೆಗೆದುಕೊಳ್ಳಿ, ನಿಮ್ಮ ಊಷಾ ಮಶಿನಿನ ಹತ್ತಿರ ತೆಗೆದುಕೊಂಡು ಹೋಗಿ ರಿಬ್ಬನ್ನನ್ನು ಕತ್ತಿನ ಅಳತೆಯ ಬಲಭಾಗದಲ್ಲಿಟ್ಟು ಪ್ರೆಸ್ಸರ್ ಫುಟ್ ನ ಸಹಾಯದಿಂದ ಹೊಂದಿಸಿ. ಮಶೀನನ್ನು ನೇರ ಹೊಲಿಗೆಗೆ ಇಟ್ಟು ಹೊಲಿಗೆಯ ಉದ್ದ 2.2ಗೆ ಇಡಬೇಕು. ವೀಡಿಯೋದಲ್ಲಿ ತೋರಿಸಿರುವ ಹಾಗೆ ಹೊಲೆಯಲು ಶುರುಮಾಡಿ. ನಿಮ್ಮ ಹಂಡಿವರ್ಕ್ ಹೀಗೆ ಕಾಣಬೇಕು. ಈಗ ಇದನ್ನು ಇಲ್ಲೇ ಬಿಟ್ಟು ಮುಂದಿನ ಹಂತಕ್ಕೆ ಹೋಗೋಣ.

## ಹಂತ 4 : ತೋಳು, ಸೈಡ್ ಸೀಮ್ಸ್ ಮತ್ತು ಅಂಚಿನ ಭಾಗವನ್ನು ಹೆಮ್ ಮಾಡೋಣ.









ಈಗ ಸೈಡ್ ಸೀಮನ್ನು ಹೊಲೆಯೋಣ. ತೋಳಿನ ತೆರೆದಿರುವ ತುದಿಯನ್ನು ತೆಗೆದುಕೊಂಡು ವೀಡಿಯೋದಲ್ಲಿ ತೋರಿಸಿರುವಂತೆ ಸೇರಿಸಿ ಬಟ್ಟೆಯ ಹಿಂಭಾಗದಿಂದ ಹೊಲೆಯಿರಿ. ಬಟ್ಟೆಯ ಅಂತ್ಯದವರೆಗೂ ಹೊಲೆಯಿರಿ. ಇದೇ ವಿಧಾನವನ್ನು ಇನ್ನೊಂದು ಬದಿಗೂ ಪುನರವರ್ತಿಸಿ,ತೋಳಿನಿಂದ ಶುರುಮಾಡಿ ಅಂತ್ಯದವರೆಗೂ ಹೊಲೆಯಿರಿ.

ತೋಳನ್ನು ಹೊಲೆಯುವುದು ನಮ್ಮ ಮುಂದಿನ ಹೆಜ್ಜೆ. ವೀಡಿಯೋದಲ್ಲಿ ತೋರಿಸಿರುವ ಹಾಗೆ ತೋಳನ್ನು ಅರ್ಧ ಇಂಚು ಹೊರಕ್ಕೆ ಮಡಚಿ. ವೃತ್ತಾಕಾರದ ಹೊಲಿಗೆ ಹಾಕಲು ಸುಲಭವಾಗುವಂತೆ ಅಸೆಸರಿ ಬಾಕ್ ಅನ್ನು ತೆಗೆಯಿರಿ.ಪ್ರೆಸ್ಸರ್ ಫುಟನ್ನು ಹೊಂದಿಸಿ. ಸುತ್ತಲೂ ಹೊಲೆಯಿರಿ, ಹೊಲೆಯುತ್ತಾ ಹಾಗೆ ಹೊಂದಿಸಿಕೊಣ್ಡು ಹೋಗಿ. ದಾರವನ್ನು ಕತ್ತರಿಸಿ ಇದೇ ವಿಧಾನವನ್ನು ಇನ್ನೊಂದು ಕಡೆಗೂ ಪುನರಾವರ್ತಿಸಿ.

ನಿಮ್ಮ ಅಂತಿಮ ಹೊಲಿಗೆ ಹೀಗೆ ಕಾಣಬೇಕು. ಇದಾದ ನಂತರ ಡ್ರೆಸಿನ ಅಂಚನ್ನು ತೋಳನ್ನು ಮಡಚಿದಂತೆ ಎರಡು ಬಾರಿ ಮಡಚಿ ಪೂರ್ತಿ ಹೊಲೆಯಿರಿ. ಹೆಚ್ಚುವರಿಯಾದ ದಾರವನ್ನು ಕತ್ತರಿಸಿ. ಇದು ನಿಮ್ಮ ಡ್ರೆಸ್ಸಿಗೆ ಚೆಂದವಾದ ನೋಟವನ್ನು ನೀಡುತ್ತದೆ. ಒಳ್ಳೆ ಕೆಲಸ! ನಿಮ್ಮ ಡ್ರೆಸ್ ಈಗ ಮುಕ್ಕಾಲು ಭಾಗ ಮುಗಿದಂತೆ.

ಕತ್ತಿನ ಭಾಗ ಇನ್ನೂ ಪೂರ್ಣವಾಗಿಲ್ಲ ಅಲ್ಲಾ? ಈಗ ಅದನ್ನು ಹೊಲೆಯೋಣ. ಕತ್ತಿನ ಭಾಗವನ್ನು ಕೈನಿಂದ ಹೆಮ್ ಮಾಡೋಣ. ರಿಬ್ಬನ್ನನ್ನು ಹಿಂಭಾಗಕ್ಕೆ ಮಡಚಿ ಬಟ್ಟೆಯ ಒಳಕ್ಕೆ ಮಡಚಿ ಹೊಲೆಯಿರಿ.ಪೂರ್ತಿ ಒಂದು ಸುತ್ತು ಹೊಲೆಯಿರಿ. ನಿಮ್ಮ ಹೊಲಿಗೆ ಹೀಗೆ ಕಾಣಬೇಕು. ಈಗ ಮುಗಿಯಿತು. ನಮ್ಮ ಪರ್ಫೆಕ್ಟ್ A – ಲೈನ್ ರಾಗ್ಲನ್ ಡ್ರೆಸ್ ತಯಾರಾಗಿದೆ.



ಅದ್ಭುತವಾಗಿದೆ ಅಲ್ಲಾ? ನಂಬಿ A – ಲೈನ್ ರಾಗ್ಲನ್ ಡ್ರೆಸ್ ಹೊಲೆಯುವುದು ಸುಲಭ ಮಾತ್ರವಲ್ಲಾ ಇದು ಎಲ್ಲರ ಮೈಕಟ್ಟಿಗೂ ಹೊಂದುತ್ತದೆ. ನೀವೇ ಪ್ರಯತ್ನಿಸಿ ಮತ್ತು ನಮಗೆ ತಿಳಿಸಿ.

ಮರೀದೆ ಲೈಕ್ ಮಾಡಿ, ಶೇರ್ ಮಾಡಿ ಹಾಗೂ ಸಬ್ ಸ್ಕ್ರೈಬ್ ಮಾಡಿ.